**ಸಿಸಿ ಸಂಃ 304/2011**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಹೊಸಕೋಟೆ**

| | |
|---|---|
| ಸಾಕ್ಷಿದಾರರ ಹೆಸರು :ಭೈರೇಗೌಡ | ಪಿ ಡಬ್ಲ್ಯೂ - 12 ಸಿ ಡಬ್ಲ್ಯೂ - 13 |
| ತಂದೆ ಹೆಸರುಃ ಲೇಟ್ ಭೈರ ಹನುಮಯ್ಯ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ: **29.10.2025** |
| ವಯಸ್ಸುಃ 63 ವರ್ಷ | |
| ವೃತ್ತಿಃ ನಿವೃತ್ತ ಎ.ಎಸ್.ಐ | |
| ವಾಸ ಸ್ಥಳಃ ನೆಲವಾಗಿಲು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ</u>**

ನಾನು ದಿ:23.05.2005 ರಿಂದ 2011 ರವರೆಗೆ ನಂದಗುಡಿ ಪೋಲಿಸ್ ಠಾಣೆಯ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ08.01.2011 ರಂದು ಬೆಳಗ್ಗೆ ಠಾಣಾ ರೋಲ್ ಕಾಲ್ ನಲ್ಲಿ ಚಾ.ಸಾ.16 ರವರು ನನ್ನನ್ನು, ಚಾ.ಸಾ.1, ಚಾ.ಸಾ.10 ರಿಂದ 12 ರವರನ್ನು ಅರೇಹಳ್ಳಿ ಗ್ರಾಮಕ್ಕೆ ಬಂದೋಬಸ್ತ್ ಕರ್ತವ್ಯಕ್ಕೆ ನೇಮಕ ಮಾಡಿರುತ್ತಾರೆ, ಅದರಂತೆ ನಾವುಗಳು ಅರೇಹಳ್ಳಿ ಗ್ರಾಮಕ್ಕೆ ಹೋಗಿ ಮೇಲಾಧಿಕಾರಿಗಳ ಆದೇಶದಂತೆ ಕರ್ತವ್ಯ ನಿರ್ವಹಿಸುತ್ತಿರುವಾಗ ಸಂಜೆ 7:15 ಗಂಟೆ ಸಮಯದಲ್ಲಿ ಚಾ.ಸಾ.1 ರವರು ಅರೇಹಳ್ಳಿ ಗ್ರಾಮದ ಅರಳಗೆರೆ ನಾರಾಯಣಪ್ಪನವರ ಮನೆಯ ಮುಂಭಾಗದ ರಸ್ತೆಯಲ್ಲಿ ಗಸ್ತು ಮಾಡಿಕೊಂಡು ಹೋಗುತ್ತಿರುವಾಗ, ಸದರಿ ಗ್ರಾಮದ ಚಿಕ್ಕಗುಟ್ಟಪ್ಪನವರ ಮಗ ಮುನಿರಾಜು, ಅಂದ್ರಪ್ಪನವರ ಮಗನಾದ ಮುನಿರಾಜು ರವರು ಗಸ್ತು ಮಾಡುತ್ತಿದ್ದ ಚಾ.ಸಾ.1 ರವರನ್ನು ತಡೆದು, ನೀವು ನಮ್ಮ ಗ್ರಾಮದ ಕಾಲೋನಿಗೆ ಬಂದು, ನಮ್ಮ ಮೇಲೆ ಜನರನ್ನು ಎತ್ತಿಕಟ್ಟಿ ಗಲಾಟೆ ಮಾಡಿಸುತ್ತಿರಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೈಗಳಿಂದ ಹೊಡೆದು,

ಸಮವಸ್ತ್ರದಲ್ಲಿದ್ದ ಚಾ.ಸಾ.1 ರವರನ್ನು ಹಿಡಿದು ಎಳೆದಾಡಿ, ಜೇಜನ್ನು ಹರಿದು ಹಾಕಿ ನಿಮ್ಮನ್ನು ಡ್ಯೂಟಿ ಮಾಡಲು ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆ. ಹಾಗೂ ಮುನಿಹನುಮಪ್ಪ, ಆಂಜಿನಪ್ಪ, ಇಂದ್ರಮ್ಮ, ಶಿಲ್ಪ ರವರು ಚಾ.ಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು, ಸರ್ಕಾರಿ ಕೆಲಸಕ್ಕೆ ಅಡ್ಡಿ ಉಂಟು ಮಾಡಿರುತ್ತಾರೆ. ಕರ್ತವ್ಯದಲ್ಲಿದ್ದ ನಾವುಗಳು ಮತ್ತು ಚಾ.ಸಾ.6 ರಿಂದ 8 ಹೋಗಿ ಸಮಾಧಾನ ಪಡಿಸಿ, ಜಗಳವನ್ನು ಬಿಡಿಸಿರುತ್ತೇವೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮು.ಮಾಲು-1 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಗೈರು ಹಾಜರಿರುವ ಆರೋಪಿತರನ್ನು ನಾನು ನೋಡಿರುತ್ತೇನೆ, ಅವರನ್ನು ಗುರುತಿಸುವ ಬಗ್ಗೆ ಆರೋಪಿ ಪರ ವಕೀಲರು ಆಕ್ಷೇಪಣೆ ಇಲ್ಲ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:</u>

ನಾವು ಠಾಣೆಯನ್ನು ಸುಮಾರು 10:00 ಗಂಟೆಗೆ ಬಿಟ್ಟಿರುತ್ತೇನೆ. ನಾವು ಆ ದಿನ ವಾಹನದಲ್ಲಿ ಹೋಗಿರುತ್ತೇವೆ, ಯಾವ ವಾಹನದಲ್ಲಿ ಹೋಗಿರುತ್ತೇವೆ ಎಂದು ಹೇಳಲು ಆಗುವುದಿಲ್ಲ. ಆ ದಿನ ಠಾಣೆಯನ್ನು ಬಿಟ್ಟಾಗ, ನೀವು ಠಾಣಾ ಡೈರಿಯಲ್ಲಿ ನಮೂದು ಮಾಡಿರುತ್ತಿರಾ ಎಂದರೆ ಅದನ್ನು ನನ್ನ ಮೇಲಾಧಿಕಾರಿಗಳು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಘಟನಾ ಸ್ಥಳಕ್ಕೆ 10:00 ಗಂಟೆಗೆ ಹೋಗಿರುತ್ತೇವೆ. ಸ್ಥಳಕ್ಕೆ ಹೋದಾಗ ಪೋಲಿಸ್ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ, ಸಾಕ್ಷಿ ಸ್ವತಃ ಮುಂದುವರೆದು, ನಾವು ಸ್ಥಳಕ್ಕೆ ಹೋದಾಗ ಆರೋಪಿಗಳು ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

ಗಲಾಟೆ ಆದ ಸಮಯದಲ್ಲಿ ನಾನು ಘಟನಾ ಸ್ಥಳದಿಂದ ಸ್ವಲ್ಪ ದೂರದಲ್ಲಿದ್ದೆ. ಮು.ಮಾಲು-1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಗಲಾಟೆ ಆಗಿರುವುದಿಲ್ಲ, ನಾನು ಗಲಾಟೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರವರು ಪೋಲಿಸರು ಮತ್ತು ನಾನೂ ಕೂಡ ಪೋಲಿಸ್ ಎಂದರೆ ಸರಿ. ಚಾ.ಸಾ.1 ರವರು ಘಟನಾ ಸ್ಥಳದಲ್ಲಿರಲಿಲ್ಲ ಮತ್ತು ಘಟನಾ ಸ್ಥಳದಲ್ಲಿ ಯಾವುದೇ ಘಟನೆ ಆಗಿರುವುದಿಲ್ಲ, ಆದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ ಠಾಣೆಯನ್ನು ಬಿಟ್ಟು ಎಲ್ಲೂ ಹೋಗಿರುವುದಿಲ್ಲ, ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ